**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಬೆಂಗಳೂರು**

**ರಾಜ್ಯಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ - 2022-23**

# ಮಾದರಿ ಉತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ: 8 X 1 8**

**1. 'ನೀಲಿ ನೀರಿನ ನೀತಿ'ಯನ್ನು ಜಾರಿಗೆ ತಂದವನು**
- (A) ಫ್ರಾನ್ಸಿಸ್ಕೊ ಡಿ ಅಲ್ಮೇಡ್

2. ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಏಪ್ರಿಲ್, ಮೇ ತಿಂಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಉಂಟಾಗುವ ಮಳೆಯನ್ನು ಕರೆದಿರುವುದು
- (B) ಕಾಲ ಬೈಸಾಕಿ

**3. ಭಾರತದ ಹಸಿರು ಕ್ರಾಂತಿಯ ಪಿತಾಮಹ**
- (C) ಡಾ. ಎಂ.ಎಸ್.ಸ್ವಾಮಿನಾಥನ್

**4. ಮೊದಲನೇ ಮಹಾಯುದ್ಧದ ಸಂದರ್ಭದಲ್ಲಿ ಕದನ ಬಾಂಧವ್ಯತ್ರಯ ಮೈತ್ರಿಕೂಟವನ್ನು ರಚಿಸಿದ ರಾಷ್ಟ್ರಗಳು**
- (B) ಬ್ರಿಟನ್, ಫ್ರಾನ್ಸ್, ರಷ್ಯಾ

**5. ಡಾ. ಶಿವರಾಮ ಕಾರಂತರು ನೇತೃತ್ವ ವಹಿಸಿದ್ದ ಪರಿಸರ ಚಳವಳಿ**
- (C) ಕೈಗಾ ವಿರೋಧಿ ಚಳವಳಿ

**6. 'ಲಡಾಖ್' ಪ್ರಸ್ಥಭೂಮಿ ಕಂಡುಬರುವುದು**
- (B) ಮಹಾ ಹಿಮಾಲಯಗಳಲ್ಲಿ

**7. 1948 ಡಿಸೆಂಬರ್, 10 ಒಂದು ಮಹತ್ವದ ದಿನವಾಗಿದೆ ಏಕೆಂದರೆ ಆ ದಿನ**
- (A) ವಿಶ್ವಸಂಸ್ಥೆ ಮಾನವ ಹಕ್ಕುಗಳನ್ನು ಉದ್ಘೋಷಿಸಿತು.

**8. ಗ್ರಾಹಕ ಸಂರಕ್ಷಣೆಯ ಆಂದೋಲನ ಮೊದಲಿಗೆ ಪ್ರಾರಂಭವಾದ ದೇಶ**
- (D) ಅಮೇರಿಕಾ ಸಂಯುಕ್ತ ಸಂಸ್ಥಾನ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8 X 1 = 18**

**9. ಡಾ. ಹರಾಲುವಿಗೆ 'ಕೈಸರ್-ಇ-ಹಿಂದ್' ಬಿರುದನ್ನು ಏಕೆ ನೀಡಿದರು?**
- **ಗಾಯಿಡಿನ್ ಲೂ ಬಗ್ಗೆ ಸುಳಿವು ನೀಡಿದ್ದರಿಂದ** ಡಾ. ಹರಾಲುವಿಗೆ 'ಕೈಸರ್-ಇ-ಹಿಂದ್' ಬಿರುದನ್ನು ನೀಡಿದರು.

**10. ನಿಶ್ಶಸ್ತ್ರೀಕರಣ ಪ್ರಚಲಿತ ಜಗತ್ತಿನ ಅವಶ್ಯಕತೆಯಾಗಿದೆ. ಏಕೆ?**
- **ಶಸ್ತ್ರಾಸ್ತ್ರಗಳ ತೀವ್ರ ಪೈಪೋಟಿಯನ್ನು ನಿಲ್ಲಿಸಲು,** ನಿಶ್ಶಸ್ತ್ರೀಕರಣ ಪ್ರಚಲಿತ ಜಗತ್ತಿನ ಅವಶ್ಯಕತೆಯಾಗಿದೆ. / ಯುದ್ಧಗಳನ್ನು ತಡೆಯಲು.

**11. ವಿಶ್ವ ಇತಿಹಾಸದಲ್ಲಿ 15ನೇ ಮಾರ್ಚ್ 1962 ಒಂದು ಪ್ರಮುಖ ದಿನವಾಗಿ ಪರಿಣಮಿಸಿದ ಏಕೆ?**
- ಮಾರ್ಚ್ 15, 1962ರಂದು ಅಮೇರಿಕದ ಅಧ್ಯಕ್ಷ ಜಾನ್ ಎಫ್ ಕೆನಡಿ ಅಲ್ಲಿನ ನಾಗರಿಕರಿಗೆ ಸುರಕ್ಷತೆ, ಮಾಹಿತಿ, ನಿವೇದನೆ ಮತ್ತು ಪರಿಹಾರ ಹಕ್ಕುಗಳನ್ನು ನೀಡುವ ವಿಧೇಯಕ ಅಂಗೀಕರಿಸಿದರು.

**12. ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಇಂಗ್ಲೆಂಡಿಗೆ ಏಕೆ ಮರಳಿದನು?**
- **ವೆಲ್ಲೆಸ್ಲಿಯ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿ ಟೀಕೆಗೆ ಒಳಗಾಗಿ** ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಇಂಗ್ಲೆಂಡಿಗೆ ಮರಳಿದನು.

**13. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗವು ಹೆಚ್ಚು ಮಳೆಯನ್ನು ಪಡೆಯುತ್ತದೆ. ಏಕೆ?**
- ಪಶ್ಚಿಮ ಘಟ್ಟಗಳು **ನೈರುತ್ಯ ಮಾನ್ಸೂನ್ ಮಾರುತಗಳನ್ನು** (ಅರಬೀ ಸಮುದ್ರ ಶಾಖೆ) **ತಡೆಯುವುದರಿಂದ** ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗವು ಹೆಚ್ಚು ಮಳೆಯನ್ನು ಪಡೆಯುತ್ತದೆ.

**14. ರಾಷ್ಟ್ರೀಯ ಯೋಜನಾ ಆಯೋಗವನ್ನು ಏಕೆ ರಚಿಸಲಾಯಿತು?**
- **ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸಲು** ರಾಷ್ಟ್ರೀಯ ಯೋಜನಾ ಆಯೋಗವನ್ನು ರಚಿಸಲಾಯಿತು.

**15. ಭಾರತದ ಸಂವಿಧಾನದ 17ನೇ ವಿಧಿಯ ಮಹತ್ವವೇನು?**
- ಭಾರತದ ಸಂವಿಧಾನದ 17ನೇ ವಿಧಿಯು **ಅಸ್ಪೃಶ್ಯತೆಯನ್ನು ನಿಷೇಧಿಸುತ್ತದೆ.**

**16. ನಿರುದ್ಯೋಗಕ್ಕೆ ಯಾವುದಾದರೂ ಎರಡು ಪ್ರಮುಖ ಕಾರಣಗಳನ್ನು ತಿಳಿಸಿ.**

- ಅತಿಯಾದ ಜನಸಂಖ್ಯೆ, ಯಾಂತ್ರೀಕರಣ, ಅತಿಯಾದ ಶ್ರಮವಿಭಜನೆ, ಸಾಮಾಜಿಕ ಅಸಮಾನತೆ, ಬಂಡವಾಳದ ಕೊರತೆ, ಅನಕ್ಷರತೆ (any 2)

## III. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: 8 X 2 = 16

| | |
|---|---|
| **17. ಭಾರತ ಮತ್ತು ಚೀನಾ ನಡುವಿನ ಬಾಂಧವ್ಯ ಹದಗೆಡಲು ಕಾರಣಗಳೇನು?** | **ದ್ವಿತೀಯ ಮಹಾಯುದ್ಧದ ಬಳಿಕ ಜಾಗತಿಕವಾಗಿ ಎದುರಾದ ಮುಖ್ಯ ಸಮಸ್ಯೆಗಳಾವುವು?** |
| ◆ ಭಾರತದ ಧೋರಣೆ ವಿರುದ್ಧ ಚೀನಾ ಟಿಬೇಟ ವಶ<br>◆ 1962ರಲ್ಲಿ ಚೀನಾ ಭಾರತವನ್ನು ಆಕ್ರಮಿಸಿತು.<br>◆ ಚೀನಾ ಅರುಣಾಚಲ ಪ್ರದೇಶವನ್ನು ತನ್ನದೆಂದು ಪ್ರತಿಪಾದಿಸುತ್ತಿದೆ.<br>◆ ಮಾವೋವಾದಿಗಳು ಭಾರತದಲ್ಲಿ ನಕ್ಸಲವಾದ ಹರಡುವುದು.<br>◆ ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ. | ◆ ಮಾನವ ಹಕ್ಕುಗಳ ನಿರಾಕರಣೆ<br>◆ ಶಸ್ತ್ರಾಸ್ತ್ರಗಳ ಪೈಪೋಟಿ<br>◆ ಆರ್ಥಿಕ ಅಸಮಾನತೆ<br>◆ ಭಯೋತ್ಪಾದಕತೆ |

| | |
|---|---|
| **18. ದೊಂಬಿಯ ಲಕ್ಷಣಗಳೇನು?** | **ವರದಕ್ಷಿಣೆಯ ದುಷ್ಪರಿಣಾಮಗಳು ಯಾವವು?** |
| ◆ ಕನಿಷ್ಠ ಮಟ್ಟದ ಉದ್ದೇಶ, ಏಕತೆ ಇರುವುದಿಲ್ಲ.<br>◆ ಗೊಂದಲ ಸೃಷ್ಟಿಸುವುದೇ ಇದರ ಉದ್ದೇಶವಾಗಿರುತ್ತದೆ<br>◆ ಕೆಲಮೊಮ್ಮೆ ಅಪಾರ ಹಾನಿಯನ್ನುಂಟು ಮಾಡುತ್ತವೆ.<br>◆ ಇಲ್ಲಿನ ಆಕ್ರಮಣಕ್ಕೆ ನಿಶ್ಚಿತವಾದ ಗುರಿ ಇರುವುದಿಲ್ಲ.<br>◆ ಕಾನೂನು, ಸುವ್ಯವಸ್ಥೆಗೆ ಗಂಭೀರ ಸವಾಲುಗಳಾಗಿವೆ.<br>◆ ಕೋಮುಗಲಭೆ, ಗುಂಪು ಘರ್ಷಣೆಗಳು ಉದಾಹರಣೆಗಳು | ◆ ಸ್ತ್ರೀಯರ ಸ್ವಾಭಿಮಾನ, ಸ್ಥಾನಮಾನವನ್ನು ಕುಗ್ಗಿಸುತ್ತದೆ<br>◆ ಕೌಟುಂಬಿಕ ಕಲಹಗಳನ್ನುಂಟು ಮಾಡುತ್ತದೆ.<br>◆ ಇದರಿಂದ ಅನೈತಿಕತೆ ಮತ್ತು ಕ್ರೌರ್ಯ ಹೆಚ್ಚುವುದು.<br>◆ ಕೌಟುಂಬಿಕ ಸಂಬಂಧಗಳು ಹಾಳಾಗುವುವು.<br>◆ ವರದಕ್ಷಿಣೆ ದಾಹದಿಂದ ಮೋಸದ ವಿವಾಹಗಳು ನಡೆಯುತ್ತಿವೆ<br>◆ ಹೆಣ್ಣು ಭ್ರೂಣ ಹತ್ಯೆ & ಹೆಣ್ಣು ಶಿಶು ಹತ್ಯೆ ಹೆಚ್ಚುತ್ತಿವೆ.<br>◆ ವಿವಾಹ ವಿಚ್ಛೇದನ ಪ್ರಕರಣಗಳು ಹೆಚ್ಚುತ್ತಿವೆ. |

**19. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು ಯಾವುವು?**

- ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
- ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು.
- ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು
- ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.
- ಯಾವುದೇ ರಾಜ್ಯದೊಂದಿಗೆ ಯುದ್ಧ/ಸಂಧಾನ ಮಾಡಿಕೊಳ್ಳಬೇಕಾದರೆ ಬ್ರಿಟಿಷರ ಸಮ್ಮತಿ ಬೇಕು.
- ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

**20. ಸರ್ಕಾರವು ವಿಧಿಸುವ ಪ್ರತ್ಯಕ್ಷ ತೆರಿಗೆಗಳು ಯಾವುವು?**

- ವರಮಾನ ತೆರಿಗೆ
- ಕಂಪನಿ ತೆರಿಗೆ
- ಸಂಪತ್ತಿನ ತೆರಿಗೆ
- ಸ್ಟಾಂಪ್ ಶುಲ್ಕ

**21. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳನ್ನು ತಿಳಿಸಿ.**

- ಉಳಿತಾಯ ಖಾತೆ
- ಚಾಲ್ತಿ ಖಾತೆ
- ಆವರ್ತ ಠೇವಣಿ ಖಾತೆ
- ನಿಶ್ಚಿತ ಠೇವಣಿ ಖಾತೆ

**22. ಪೂರ್ವ ಕರಾವಳಿಯ ಜನರು ಅತಿ ಹೆಚ್ಚು ನೈಸರ್ಗಿಕ ವಿಕೋಪಗಳನ್ನು ಎದುರಿಸುತ್ತಾರೆ. ಕಾರಣಗಳೊಂದಿಗೆ ವಿವರಿಸಿ.**

- ಬಂಗಾಳಕೊಲ್ಲಿಯಲ್ಲಿ ಅನೇಕ ಚಂಡ ಮಾರುತಗಳು ಉಗಮಗೊಳ್ಳುತ್ತವೆ.
- ಇವು ಪೂರ್ವ ಕರಾವಳಿ ತೀರಕ್ಕೆ ಅಪ್ಪಳಿಸುತ್ತವೆ.
- ಜೊತೆಗೆ ಪ್ರವಾಹಗಳು ಉಂಟಾಗುತ್ತವೆ.
- ಆದ್ದರಿಂದ ಪೂರ್ವ ಕರಾವಳಿಯ ಜನರು ಅತಿ ಹೆಚ್ಚು ನೈಸರ್ಗಿಕ ವಿಕೋಪಗಳನ್ನು ಎದುರಿಸುತ್ತಾರೆ.

**23. ಭಾರತದಲ್ಲಿ ಕಾಗದದ ಕೈಗಾರಿಕೆಗೆ ಬೇಡಿಕೆಯು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರಲು ಕಾರಣಗಳೇನು?**

- ಬರವಣಿಗೆಗೆ ಬಳಕೆ
- ಮುದ್ರಣಕ್ಕಾಗಿ ಬಳಕೆ
- ಪ್ಯಾಕಿಂಗ್‌ಗೆ ಬಳಕೆ
- ಹೆಚ್ಚುತ್ತಿರುವ ಜನಸಂಖ್ಯೆ

**24. ಮಾರ್ತಾಂಡ ವರ್ಮನು ಭಾರತದಲ್ಲಿ ಡಚ್ಚರ ಅಧಿಕಾರದ ಅವನತಿಗೆ ಹೇಗೆ ಕಾರಣನಾದನು?**

- 1741ರಲ್ಲಿ ಡಚ್ಚರು ತಿರುವಾಂಕೂರು ಮೇಲೆ ಯುದ್ಧ ಸಾರಿದರು.
- ಮಾರ್ತಾಂಡ ವರ್ಮ ಅದನ್ನು ಹಿಮ್ಮೆಟ್ಟಿಸಿದನು.
- ಕೊಳಚ್ಚಲ್ ಯುದ್ಧದಲ್ಲಿ ತಿರುವಾಂಕೂರು ಮೇಲುಗೈ ಸಾಧಿಸಿತು.
- ದಕ್ಷಿಣ ಭಾರತದಿಂದ ಡಚ್ಚರನ್ನು ಕಿತ್ತೊಗೆಯಬೇಕೆಂದು ಪಣತೊಟ್ಟನು.
- ಕೇರಳ, ತಮಿಳುನಾಡಿನಲ್ಲಿ ಮೆಣಸಿನ ವ್ಯಾಪಾರದ ಹಕ್ಕನ್ನು ಸ್ಥಾಪಿಸಿದನು.
- ಡಚ್ಚರ ಹಿಡಿತದಲ್ಲಿದ್ದ ಬಂದರುಗಳನ್ನು ಮರಳಿ ಪಡೆದನು.

## IV. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: 9X3=27

| **25. ಪ್ರಸ್ತುತ ಭಾರತದಲ್ಲಿ ಭೂಬಳಕೆಯ ಪ್ರಕಾರಗಳು ಯಾವುವು?** | **ಭಾರತದ ಪೂರ್ವ ತೀರಗಳಲ್ಲಿ ಕಂಡಬರುವ ಪ್ರಮುಖ ಬಂದರುಗಳು ಯಾವುವು?** |
|---|---|
| ◆ ನಿವ್ವಳ ಸಾಗುವಳಿ ಕ್ಷೇತ್ರ<br>◆ ಅರಣ್ಯ ಭೂಮಿ<br>◆ ವ್ಯವಸಾಯೇತರ ಭೂ ಬಳಕೆ<br>◆ ಬೀಳು ಭೂಮಿ<br>◆ ಹುಲ್ಲುಗಾವಲು<br>◆ ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ | ◆ ಕೊಲ್ಕತ್ತಾ<br>◆ ಹಾಲ್ದಿಯಾ<br>◆ ಪಾರಾ ದೀಪ<br>◆ ವಿಶಾಖ ಪಟ್ಟಣ<br>◆ ಚೆನ್ನೈ<br>◆ ತುತುಕುಡಿ |

| **26. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ.** | **ತೆರಿಗೆಯೇತರ ಆದಾಯಗಳ ಮೂಲಗಳನ್ನು ವಿವರಿಸಿ.** |
|---|---|
| ◆ ಅಭಿವೃದ್ಧಿಯಲ್ಲಿ ಗ್ರಾಮದ ಜನರು ಪಾಲ್ಗೊಳ್ಳುವಂತೆ ಮಾಡುವದು.<br>◆ ಗ್ರಾಮೀಣ ಮೂಲ ಸೌಕರ್ಯಗಳ ಅಭಿವೃದ್ಧಿ.<br>◆ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಕ್ಕೆ ಪ್ರೋತ್ಸಾಹ.<br>◆ ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ.<br>◆ ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ.<br>◆ ಗ್ರಾಮೀಣ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸುವುದು<br>◆ ವಸತಿಹೀನರಿಗೆ ಮನೆಗಳನ್ನು ನಿರ್ಮಿಸಿಕೊಡಬಹುದು.<br>◆ ಬಡಜನರಿಗೆ ಆಹಾರ ಧಾನ್ಯ ಒದಗಿಸುವುದು.<br>◆ ಸಮಾಜ ಕಲ್ಯಾಣ ಸೇವೆಗಳನ್ನು ಒದಗಿಸಬಹುದು.<br>◆ ಗ್ರಾಮೀಣ ಕಲೆ, ಸಂಸ್ಕೃತಿ ಶ್ರೀಮಂತಗೊಳ್ಳುತ್ತದೆ. | ◆ ಭಾರತೀಯ ರಿಸರ್ವ್ ಬ್ಯಾಂಕು ಗಳಿಸುವ ನಿವ್ವಳ ಲಾಭ.<br>◆ ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ.<br>◆ ಅಂಚೆ & ದೂರವಾಣಿ ಸೇವೆಗಳಿಂದ ಬರುವ ಆದಾಯ.<br>◆ ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ.<br>◆ ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ.<br>◆ ವಿವಿಧ ರೀತಿಯ ಶುಲ್ಕಗಳು, ದಂಡಗಳು. |

| **27. ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದ ಆಗುವ ಅನುಕೂಲಗಳು ಯಾವುವು?** | **ಉದ್ಯಮಶೀಲತೆಯ ಗುಣಲಕ್ಷಣಗಳು ಯಾವುವು?** |
|---|---|
| ◆ ಹಣದ ಭದ್ರತೆ ಕಾಪಾಡುತ್ತದೆ.<br>◆ ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.<br>◆ ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.<br>◆ ಬ್ಯಾಂಕು ಖಾತೆ ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.<br>◆ ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯಮಾಡಿಕೊಡುತ್ತದೆ.<br>◆ ಭದ್ರತಾ ಕಪಾಟುಗಳನ್ನು ಪಡೆಯಬಹುದು. | ◆ ಸೃಜನಾತ್ಮಕ ◆ ನಾಯಕತ್ವ<br>◆ ಗುರಿಮುಟ್ಟುವಿಕೆ ◆ ಆತ್ಮವಿಶ್ವಾಸ<br>◆ ತಂಡವನ್ನು ಕಟ್ಟುವುದು<br>◆ ಸಮಸ್ಯೆಯ ಪರಿಹಾರ<br>◆ ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು<br>◆ ಹೊಸ ಪದ್ದತಿಯನ್ನು ರೂಢಿಗೆ ತರುವುದು |

| 28. ಭಾರತದಲ್ಲಿ ಬ್ರಿಟಿಷರ ಭೂ ಕಂದಾಯ ನೀತಿಯ ಪರಿಣಾಮಗಳಾವುವು? | ಭಾರತ ಒಕ್ಕೂಟಕ್ಕೆ ಹೈದರಾಬಾದ್ ಮತ್ತು ಜುನಾಗಡ್ ಹೇಗೆ ವಿಲೀನವಾದವು? |
|---|---|
| ◆ ರೈತರನ್ನು ಶೋಷಿಸುವ ಜಮೀನ್ದಾರಿ ವರ್ಗ ಸೃಷ್ಟಿಯಾಯಿತು.<br>◆ ಜಮೀನ್ದಾರರ ಶೋಷಣೆಯಿಂದ ರೈತರು ಸಂಕಷ್ಟಕ್ಕೆ ಒಳಗಾದರು.<br>◆ ಶೋಷಣೆಯಿಂದ ರೈತರು ನಿರ್ಗತಿಕರಾದರು.<br>◆ ಭೂಮಿ ಮಾರಾಟದ ವಸ್ತುವಾಯಿತು.<br>◆ ಜಮೀನ್ದಾರರು ಕಂದಾಯ ಸಲ್ಲಿಸಲಾಗದೇ ತಮ್ಮ ಜಮೀನನ್ನು ಪರಭಾರೆ ಮಾಡಿದರು.<br>◆ ಕೃಷಿ ಕ್ಷೇತ್ರವು ವಾಣಿಜ್ಯೀಕರಣಗೊಂಡಿತು.<br>◆ ಕೈಗಾರಿಕೀಕರಣದಿಂದ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.<br>◆ ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು. | **ಹೈದರಾಬಾದ್**<br>◆ ಹೈದರಾಬಾದ್ ಸಂಸ್ಥಾನವು ನಿಜಾಮನ ಅಧೀನದಲ್ಲಿತ್ತು.<br>◆ ಈತನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಿಸಿದನು.<br>◆ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ ಹೈದರಾಬಾದ್ ಸಂಸ್ಥಾನವನ್ನು ಭಾರತದೊಂದಿಗೆ ವಿಲೀನಗೊಳಿಸಿತು.<br>**ಜುನಾಗಢ**<br>◆ ಜುನಾಗಢದ ನವಾಬನು ಜುನಾಗಢವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದ್ದನು.<br>◆ ಆಗ ಪ್ರಜೆಗಳು ಆತನ ವಿರುದ್ಧ ಬೀದಿಗಿಳಿದರು.<br>◆ ನವಾಬನು ಪಲಾಯನ ಮಾಡಿದನು.<br>◆ 1949ರಲ್ಲಿ ಜುನಾಗಢ್ ಭಾರತ ಒಕ್ಕೂಟಕ್ಕೆ ಸೇರಿತು. |

**29. ಸಂಘಟಿತ ವಲಯದ ಕೆಲಸಗಾರರು ಅಸಂಘಟಿತ ವಲಯದ ಕೆಲಸಗಾರರಿಗಿಂತ ಹೇಗೆ ಭಿನ್ನವಾಗಿದ್ದಾರೆ ?**

| ಅಸಂಘಟಿತ ಕೆಲಸಗಾರರು | ಅಸಂಘಟಿತ ಕೆಲಸಗಾರರು |
|---|---|
| ✓ ಕಾನೂನು, ಕಾಯ್ದೆಗಳಿಗೆ ಬದ್ಧವಾದ ಕ್ಷೇತ್ರದಲ್ಲಿ ಕೆಲಸ ಮಾಡುವವರೇ ಸಂಘಟಿತ ಕೆಲಸಗಾರರು.<br>✓ ನಿಗದಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತಿವೇತನ ಸೌಲಭ್ಯ ನೀಡಲಾಗುತ್ತದೆ.<br>✓ ನಿಗದಿತ ಸಮಯದಲ್ಲಿ ಕಾರ್ಯ ನಿರ್ವಹಿಸುವರು.<br>✓ ಉದಾ: ಖಾಸಗಿ ಕಂಪನಿ, ಕಾರ್ಖಾನೆ, ಕೈಗಾರಿಕೆಗಳು, ಸರ್ಕಾರಿ ಇಲಾಖೆಗಳು, ಶಾಲಾ–ಕಾಲೇಜುಗಳು, ವಾಣಿಜ್ಯ ಬ್ಯಾಂಕು, ಸೈನ್ಯ ಇತ್ಯಾದಿ | ✓ ಕಾಯ್ದೆ–ಕಾನೂನು ನಿಯಂತ್ರಣಕ್ಕೆ ಒಳಪಡದೆ ಕೆಲಸ ಮಾಡುವವರು ಅಸಂಘಟಿತ ಕೆಲಸಗಾರರು.<br>✓ ನಿಗದಿತ ವೇತನ ಮತ್ತು ಸೌಲಭ್ಯಗಳಿರುವುದಿಲ್ಲ.<br>✓ ಇವರ ಕಾರ್ಯಕ್ಷೇತ್ರವು ವಿಶಾಲವಾಗಿದೆ.<br>✓ **ಉದಾ:** ಮನೆಕೆಲಸಗಾರರು, ಗೃಹ ನಿರ್ಮಾಣ ಕೂಲಿಕಾರರು, ಕೃಷಿ ಕಾರ್ಮಿಕರು, ತರಕಾರಿ ಮಾರಾಟ, ವಾಹನಗಳ ರಿಪೇರಿ ಮಾಡುವವರು, ತಳ್ಳುವ ಗಾಡಿ ವ್ಯಾಪಾರಿ, |

**30, "ಮೈಸೂರು ರಾಜ್ಯ ಮಾದರಿ ರಾಜ್ಯವಾಗಲು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣರಾದರು". ದೃಢೀಕರಿಸಿ.**

- ಪ್ರಾಥಮಿಕ ಶಿಕ್ಷಣದ ಶಿಕ್ಷಣ ಶುಲ್ಕ ರದ್ದುಪಡಿಸಿದರು.
- ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ಕಿತು.
- ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲ್ಪಟ್ಟಿತು.
- ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಸ್ಥಾಪನೆ.
- ಭದ್ರಾವತಿಯ ಕಬ್ಬಿಣ & ಉಕ್ಕಿನ ಕಾರ್ಖಾನೆ ಸ್ಥಾಪನೆ.
- ಸಿಮೆಂಟ್, ಕಾಗದ, ಸಕ್ಕರೆ ಕಾರ್ಖಾನೆಗಳ ಸ್ಥಾಪನೆ
- ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ ಸ್ಥಾಪನೆ.
- ಬೆಂಗಳೂರಿನ ಸಾಬೂನು ಕಾರ್ಖಾನೆ ಸ್ಥಾಪನೆ.
- ಬೆಳಗೊಳ ಹತ್ತಿರ ಕಾವೇರಿ ನದಿಗೆ ಅಣೆಕಟ್ಟು ಕಟ್ಟಲಾಯಿತು.
- ನ್ಯಾಯ ವಿಧಾಯಕ ಸಭೆಯನ್ನು ರಚಿಸಲಾಯಿತು.
- ಈ ಸುಧಾರಣೆಗಳಿಂದ ಮೈಸೂರು ರಾಜ್ಯ ಮಾದರಿ ರಾಜ್ಯವಾಗಲು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣರಾದರು.

**31. ವಿಶ್ವಸಂಸ್ಥೆಯ ಧ್ಯೆಯೋದ್ದೇಶಗಳನ್ನು ತಿಳಿಸಿ.**

- ಅಂತರರಾಷ್ಟ್ರೀಯ ಶಾಂತಿ, ಸುಭದ್ರತೆ ಕಾಪಾಡುವುದು.
- ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.
- ಮೂಲಭೂತ ಹಕ್ಕುಗಳ ಬಗ್ಗೆ ನಂಬುಗೆ ಹೆಚ್ಚಿಸುವುದು.
- ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹಾರ ಕೈಗೊಳ್ಳುವುದು

- ಅಂತರರಾಷ್ಟ್ರೀಯ ನ್ಯಾಯ, ಒಡಂಬಡಿಕೆಗಳಿಗೆ ಮನ್ನಣೆ ಒದಗಿಸುವುದು.
- ರಾಷ್ಟ್ರಗಳ ಮಧ್ಯೆ ಸೌಹಾರ್ದತೆಯ ಕೇಂದ್ರವಾಗಿದೆ.

**32. ಸರ್ಕಾರವು ಅರಣ್ಯಗಳನ್ನು ಸಂರಕ್ಷಿಸಲು ಶ್ರಮಿಸುತ್ತಿದೆ. ದೃಢೀಕರಿಸಿ.**

- ಕಾಡ್ಗಿಚ್ಚು ಉಂಟುಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
- ಮರಗಳಿಗೆ ತಗಲುವ ರೋಗ ನಿಯಂತ್ರಿಸುವುದು.
- ಸಸಿಗಳನ್ನು ನೆಡುವುದು, ಬೀಜಗಳನ್ನು ಹರಡುವುದು.
- ಮರ ಕಡಿಯುವದನ್ನು ನಿಯಂತ್ರಿಸುವುದು.
- ಅರಣ್ಯಗಳಲ್ಲಿ ಮೇಯಿಸುವಿಕೆ ನಿಯಂತ್ರಿಸುವುದು.
- ಸಾರ್ವಜನಿಕರು ಮರ ನೆಡಲು ಪ್ರೋತ್ಸಾಹಿಸುವುದು.
- ಅರಣ್ಯ ರಕ್ಷಣೆಗೆ ಜನರನ್ನು ಪ್ರೇರೇಪಿಸುವುದು.
- ಸಾಮಾಜಿಕ ಅರಣ್ಯ ಯೋಜನೆ ಜಾರಿಗೆ ತರಲಾಗಿದೆ.

**33. ಭಾರತದ ಇತಿಹಾಸದಲ್ಲಿ 19ನೇಯ ಶತಮಾನವನ್ನು 'ಭಾರತೀಯ ಪುನರುಜ್ಜಿವನ ಕಾಲ' ಎಂದು ಕರೆಯಲಾಗಿದೆ. ಏಕೆ?**

- 19ನೇಯ ಶತಮಾನದಲ್ಲಿ ಪಾಶ್ಚಾತ್ಯ ನಾಗರಿಕತೆಯ ಸಂಪರ್ಕವು ಭಾರತೀಯರಿಗೆ ದೊರೆಯಿತು.
- ಈ ಅವಕಾಶದಿಂದ ಇಂಗ್ಲಿಷ್ ವಿದ್ಯಾಭ್ಯಾಸದ ಸೌಲಭ್ಯ ದೊರೆಯಿತು.
- ಭಾರತೀಯರಲ್ಲಿ ವೈಚಾರಿಕತೆಯ ಮನೋಭಾವ ಬೆಳೆಯಿತು.
- ಇದು ಮೂಢನಂಬಿಕೆಗಳನ್ನು ಪ್ರಶ್ನಿಸಲು ಪ್ರೇರೇಪಿಸಿತು.
- ಭಾರತೀಯರಲ್ಲಿ ಪ್ರಜಾಪ್ರಭುತ್ವ. ಸ್ವಾತಂತ್ರ್ಯ, ಸಮಾನತೆ, ರಾಷ್ಟ್ರೀಯತೆಯಂತಹ ಪಾಶ್ಚಾತ್ಯ ಪರಿಕಲ್ಪನೆಗಳು ಪರಿಚಯಿಸಿದವು.
- ಪಾಶ್ಚಾತ್ಯ ಶಿಕ್ಷಣದಿಂದ ಜಾಗೃತರಾದ ಅನೇಕರು ಸುಧಾರಣೆಗಾಗಿ ಪ್ರಯತ್ನಿಸಿದರು.
- ರಾಮ್ ಮೋಹನರಾಯ್, ದಯಾನಂದ ಸರಸ್ವತಿ, ರಾನಡೆ, ಜ್ಯೋತಿಬಾ ಫುಲೆ, ಸ್ವಾಮಿ ವಿವೇಕಾನಂದ, ಆನಿಬೆಸೆಂಟ್, ಮೊದಲಾದವರು ಸಾಮಾಜಿಕ ಸುಧಾರಣೆಗಾಗಿ ಶ್ರಮಿಸಿದರು.

## V. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 4 X 4 = 16

| | |
|---|---|
| **34. "ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವು ಕಾರಣಗಳಿಂದ ವಿಫಲವಾಯಿತು." ಈ ಹೇಳಿಕೆಗೆ ಪುಷ್ಟಿ ನೀಡಿ.** | **ತೀವ್ರಗಾಮಿಗಳು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು." ಈ ಹೇಳಿಕೆಯನ್ನು ಸ್ಪಷ್ಟೀಕರಿಸಿ.** |
| ◆ ಇಡೀ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ.<br>◆ ರಾಜರ ರಾಣಿಯರ ಸ್ವಹಿತಾಸಕ್ತಿಗಾಗಿ ನಡೆದಿತ್ತು.<br>◆ ಇದು ಯೋಜಿತ ದಂಗೆಯಾಗಿರಲಿಲ್ಲ<br>◆ ಭಾರತೀಯ ಸೈನಿಕರಲ್ಲಿ ಒಗ್ಗಟ್ಟಿರಲಿಲ್ಲ.<br>◆ ದಂಗೆಗೆ ಸೂಕ್ತ ಮಾರ್ಗದರ್ಶನವಿರಲಿಲ್ಲ<br>◆ ಸಂಘಟನೆಯ ಕೊರತೆ ಇತ್ತು.<br>◆ ಸೂಕ್ತ ಸೇನಾ ನಾಯಕತ್ವಗಳ ಕೊರತೆ ಇತ್ತು.<br>◆ ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.<br>◆ ಹಲವು ದೇಶೀಯ ರಾಜರು ಬ್ರಿಟಿಷರಿಗೆ ನಿಷ್ಠೆ ತೋರಿದರು.<br>◆ ಸಿಪಾಯಿಗಳು ಮಾಡಿದ ಲೂಟಿ, ದರೋಡೆಗಳಿಂದ ಜನರ ವಿಶ್ವಾಸ ಕಳೆದುಕೊಂಡರು. | ◆ ತೀವ್ರವಾದ ನಿಲುವು ಪ್ರತಿಪಾದಿಸುವ ಬಣವಾಗಿದೆ.<br>◆ ಲಾಲ್, ಬಾಲ್, ಪಾಲ್ ಪ್ರಮುಖರು.<br>◆ ಬಂಗಾಳ ವಿಭಜನೆಯನ್ನು ವಿರೋಧಿಸಿದರು.<br>◆ ಸ್ವದೇಶಿ ಚಳವಳಿಯನ್ನು ಪ್ರಾರಂಭಿಸಲಾಯಿತು.<br>◆ ದೇಶಾದ್ಯಂತ ಸ್ವದೇಶಿ ಚಳುವಳಿ ಆರಂಭಿಸಿದರು.<br>◆ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದರು.<br>◆ ತಿಲಕರು 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸಿದರು.<br>◆ ಜನಮಾನ್ಯರನ್ನು ಹೋರಾಟಕ್ಕೆ ಸಂಘಟಿಸಿದರು.<br>◆ ಧಾರ್ಮಿಕ ಆಚರಣೆ ಮೂಲಕ ಜನರನ್ನು ಸಂಘಟಿಸಿದರು.<br>◆ ಪತ್ರಿಕೆಗಳ ಮೂಲಕ ಜನರನ್ನು ಪ್ರೇರೇಪಿಸಿದರು<br>◆ ತಿಲಕರು ಕೇಸರಿ & ಮರಾಠ ಪತ್ರಿಕೆಗಳನ್ನು ಆರಂಭಿಸಿದರು. |

**35. "ಬ್ರಿಟಿಷ್ ಶಿಕ್ಷಣವು ಭಾರತದಲ್ಲಿ ಹೊಸ ತಲೆಮಾರನ್ನು ಸೃಷ್ಟಿಸಿತು." ಈ ಹೇಳಿಕೆಯನ್ನು ಸ್ಪಷ್ಟೀಕರಿಸಿ.**

- ರಾಷ್ಟ್ರೀಯ ದೃಷ್ಟಿಕೋನ ಬೆಳೆಸಿಕೊಳ್ಳಲು ಸಾಧ್ಯವಾಯಿತು
- ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ.
- ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ಏಕತೆ ಉಂಟಾಯಿತು.
- ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆ ಉಂಟಾಯಿತು.

- ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು.
- ಸಾಮಾಜಿಕ ಧಾರ್ಮಿಕ ಸುಧಾರಣಾ ಚಳುವಳಿ ಆರಂಭವಾದವು
- ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.
- ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.

**36. ಭಾರತವು ಇಂದು ಎದುರಿಸುತ್ತಿರುವ ಸವಾಲುಗಳು ಯಾವುವು?**

- ಕೋಮುವಾದ
- ಅನಕ್ಷರತೆ
- ಮಹಿಳೆಯರ ಸ್ಥಾನಮಾನ
- ಆರ್ಥಿಕ ಅಸಮಾನತೆ
- ಜನಸಂಖ್ಯೆ ಹೆಚ್ಚಳ
- ಬಡತನ
- ಲಾಭಕೋರತನ
- ಪ್ರಾದೇಶಿಕವಾದ
- ಭ್ರಷ್ಟಾಚಾರ
- ಕಳ್ಳ ಸಾಗಾಣಿಕೆ

**37. ನಾವು ಮಣ್ಣಿನ ಸಂರಕ್ಷಣೆಯನ್ನು ಹೇಗೆ ಕೈಗೊಳ್ಳಬಹುದು?**

- ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.
- ಅಡ್ಡ ಬದುಗಳನ್ನು ನಿರ್ಮಿಸುವುದು.
- ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ.
- ಅರಣ್ಯ ನಾಶವನ್ನು ತಡೆಗಟ್ಟುವುದು
- ಅರಣ್ಯಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು.
- ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.
- ನೀರಿನ ಯೋಜಿತ ಬಳಕೆ.
- ಚೆಕ್ ಡ್ಯಾಮ್‌ಗಳ ನಿರ್ಮಾಣ ಇತ್ಯಾದಿ.

**VI, 38, ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1+ 4 5**

a) 82 1/2 $^0$ ಪೂರ್ವ ರೇಖಾಂಶ b) ವಿಶಾಖ ಪಟ್ಟಣ c) ಭದ್ರಾವತಿ d) ನರ್ಮದಾ ನದಿ

